# ಸುಟ್ಟರೂ ಸುಳಿವ ಕಾಮ

ಅಂದು ಶಿವ ತನ್ನ ಹಣೆಗಣ್ಣಿನಿಂದ ಕಾಮನನ್ನು ಕ್ರೋಧದಿಂದಲೇ ಸುಟ್ಟ. ಸುಟ್ಟರೂ ಅಮರನಾಗಿಯೇ ಇರುವ ಕಾಮ ಎಲ್ಲರನ್ನೂ ಬಿಡದೆ ಕಾಡುತ್ತಾನೆ. ದೇವಾಧಿದೇವತೆಗಳನ್ನೇ ಬಿಡದೆ ಕಾಡಿಸಿದವನು ಕಾಮ. ಇನ್ನು ನರರ ಪಾಡನ್ನು ಏನೆಂದು ಹೇಳುವುದು. ಈ ಕಾಮನನ್ನು ಸುಟ್ಟ ಕಥೆಯೇ ಇಂದಿನ ಕಾಮನ ಹುಣ್ಣಿಮೆ ಅಥವಾ ಕಾಮನ ಹಬ್ಬಕ್ಕೆ ಮೂಲ ಪ್ರೇರಣೆಯಾಗಿದೆ.

ಕನ್ನಡದ ಕಥಾ ಸಾಹಿತ್ಯದಲ್ಲಿ ಸಣ್ಣಕತೆಗಳ ಪಿತಾಮಹ ಎಂದೇ ಕರೆಸಿಕೊಂಡಿರುವ ಮಾಸ್ತಿಯವರು 'ಕಾಮನ ಹಬ್ಬದ ಒಂದು ಕತೆ' ಎಂಬ ವಿಶಿಷ್ಟವಾದ ಕತೆ ಬರೆದಿದ್ದಾರೆ. ತಮ್ಮದಲ್ಲದ ತಪ್ಪಿಗಾಗಿ ಚಿಕ್ಕ ವಯಸ್ಸಿನಲ್ಲೇ ಮದುವೆಯಾಗಿ ಗಂಡಂದಿರನ್ನು ಕಳೆದುಕೊಂಡ ಅಥವಾ ಗಂಡಂದಿರಿಂದ ದೂರಾದ ಹೆಣ್ಣು ಮಕ್ಕಳ ಕಥೆಗಳನ್ನು ಸಾಕಷ್ಟು ಬರೆದಿದ್ದಾರೆ. ಈ ಕತೆ ಇರುವುದೇ ಕಾಮನ ಹಬ್ಬದ ಪ್ರತಿವರ್ಷದ ಆಚರಣೆ ಹಾಗೂ ಮಾಸ್ತಿಯವರು ಅದರಲ್ಲಿ ಪಾಲ್ಗೊಳ್ಳುವ ಮೂಕ ನಾಯಕಿಯಂತಹ ಸಾವಿತ್ರಮ್ಮನ ವಿಚಿತ್ರವಾದ ನಂಬಿಕೆಯ ನಿರೂಪಣೆಯಿಂದ. ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ನಾವು ಬಾಲ್ಯದಲ್ಲಿ ಕಂಡಂತೆ ಕಾಮನಹಬ್ಬವೆಂದರೆ ಎಲ್ಲರ ಮನೆಯ ಮುಂದೆ ಬಾಯಿ ಬಡಿದುಕೊಳ್ಳುವುದು, ಹಳೇಪೊರಕೆ, ಮೊರ, ಮಕ್ಕರಿ, ಚಾಪೆ, ಒಣ ಕಟ್ಟಿಗೆ ತುಂಡು ಇತ್ಯಾದಿಗಳನ್ನು ಸಂಗ್ರಹಿಸಿ ರಾತ್ರಿ ಅವುಗಳಿಗೆ ಬೆಂಕಿ ಹಚ್ಚುವುದು. ಕೆಲವರು ಸೌದೆ ಕೊಟ್ಟರೆ ಉಂಟು, ಇಲ್ಲದಿದ್ದರೆ ಇಲ್ಲ. ಈ ಕತೆಯು ನಡೆಯುವ ಪ್ರದೇಶದಲ್ಲಿ ಸಾವಿತ್ರಮ್ಮನೆಂಬ ಹತಬಾಗಿನಿಯೊಬ್ಬಳು ಇದ್ದಳು. ಆಟ ಆಡುವ ಮಕ್ಕಳಾದ ಸಾವಿತ್ರಮ್ಮ ಮತ್ತು ಶೀನಿಗೆ ಹಿರಿಯರ ನಿರ್ಧಾರದಂತೆ ಮದುವೆಯಾಗುತ್ತದೆ. ಶೀನಿ ಓದು ಬರಹದಲ್ಲಿ ಮುಂದಿಲ್ಲದಿದ್ದರೂ ತುಂಟತನಕ್ಕೆ, ಬಿಡುಬೀಸುತನಕ್ಕೆ, ಜಗಳವಾಡುವುದಕ್ಕೆ ಪ್ರಸಿದ್ಧನಾಗಿದ್ದವನು.

ಒಮ್ಮೆ ಶಿವರಂಗಸ್ವಾಮಿಗಳು ಇವರಿರುವ ಹೊಳೆನರಸೀಪುರಕ್ಕೆ ಬಂದಾಗ ಶೀನಿ ಅವರೊಡನೆ ತಂದೆ, ತಾಯಿ, ಹೆಂಡತಿಯ ಅನುಮತಿಯನ್ನೂ ಕೇಳದೆ ದೇಶಾಟನೆಗೆ ಹೊರಡುತ್ತಾನೆ. ಸುಮಾರು ಹತ್ತುವರ್ಷಗಳಾದರೂ ಹಿಂದಿರುಗುವುದಿಲ್ಲ. ನಂತರ ಕಾಯಿಲೆಯಿಂದ ಸತ್ತು ಹೋಗಿರಬೇಕು ಎಂಬ ಸುದ್ದಿ ಬರುತ್ತದೆ. ಅಂದಿನಿಂದ ಸಾವಿತ್ರಮ್ಮ ವಿಧವೆಯಂತೆ ಜೀವಿಸಲಾಂಭಿಸುತ್ತಾಳೆ. ಕಾಮನ ಹಬ್ಬದ ಬಗ್ಗೆ ಇರುವ ಒಂದು ನಂಬಿಕೆಯೆಂದರೆ ಕಾಮನನ್ನು ಸುಟ್ಟ ಮರುದಿನ ಬೂದಿ ಕಲೆಸುವ ಆಚರಣೆಯಲ್ಲಿ ವಿಧವೆಯರು ಮೈಮೇಲೆ ಬೂದಿ ಸುರಿಸಿಕೊಂಡು ಹುಡುಗರು ತಮ್ಮ ಸುತ್ತ ಬಾಯಿ ಬಡಿದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದರಿಂದಾಗಿ ಅಂತಹ ಸ್ತ್ರೀ ಮುಂದಿನ ಜನ್ಮದಲ್ಲಿ ಹೋದ ಗಂಡನೊಂದಿಗೆ ಸಂಸಾರ ಸುಖ ಲಭಿಸುತ್ತದಂತೆ. ಈ ನಂಬಿಕೆಯಿದ್ದರೂ ಯಾರೂ ಅಮಾನವೀಯ ಆಚರಣೆಗೆ ಮುಂದಾಗಿರಲಿಲ್ಲ. ಸಾವಿತ್ರಮ್ಮನ ಮೈಮೇಲೆ ಆಕೆ ಹೇಳಿದಂತೆ ಒಂದು ಮೊರ ಬೂದಿ ಸುರಿದು ಹುಡುಗರು ಬಾಯಿ ಬಾಯಿ ಬಡಿದುಕೊಳ್ಳುತ್ತಾರೆ. ನಂತರದ ವರ್ಷ ಹುಡುಗರಿಗೆ ಆಕೆಯ ಮೇಲೆ ಬೂದಿ ಸುರಿಯಲು ಸಂಕೋಚವಾಗಿ ಒಂದು ಚಿಟಿಕೆಯಷ್ಟು ಬೂದಿ ಹಾಕಿ ಒಂದು ಸಲ ಬಾಯಿ ಬಡಿದುಕೊಂಡು 'ನಡೆಯಿರಿ' ಎನ್ನುತ್ತಾರೆ. ಆಕೆ ಅದಕ್ಕೆ ಒಪ್ಪದಿದ್ದಾಗ ಹುಡುಗರು ಮೂರು ಹಿಡಿ ಬೂದಿ ಹಾಕಿ, ಮೂರು ಸುತ್ತು ಸುತ್ತಿ ಬಾಯಿ ಬಡಿದುಕೊಳ್ಳುತ್ತಾರೆ. ಸತ್ತ ಹೆಣಕ್ಕಿಂತ ಬದುಕಿರುವ ಹೆಣದ ರೀತಿ ಇರುವ ತನಗೆ ಇಂತಹ ಮರ್ಯಾದೆ ಸಿಗಬೇಕು ಎಂಬುದು ಆಕೆಯ ವಾದ. ಆ ನಂತರ ಆಕೆ ಕೆರೆಯಲ್ಲಿ ಮಿಂದು ಹಿಂದಕ್ಕೆ ಬರುವಳು. ಆ ಹುಡುಗರಿಗೆ ಈ ಕೆಲಸದಿಂದ ಕಣ್ಣೀರು ಬಂದರೂ ಆಕೆಯ ಒತ್ತಾಯಕ್ಕೆ ಮಣಿಯಬೇಕಾಗಿತ್ತು. ಸುಮಾರು ಹತ್ತಾರು ವರ್ಷಗಳ ನಂತರ ಕಾಮನ ಹಬ್ಬದಲ್ಲಿ ಒಂದು ವಿಶೇಷ ಘಟನೆ ಅನಿರೀಕ್ಷಿತವಾದರೂ ಸತ್ಯವೆನ್ನುವಂತೆ ನಡೆದು ಬಿಡುತ್ತದೆ.

ಹಬ್ಬದ ಮರುದಿನ ಬೂದಿ ಕಲೆಸಿದ ನಂತರ ಅದನ್ನು ಸಾವಿತ್ರಮ್ಮನವರು ಎಂದಿನಂತೆ ಕುಳಿತಿದ್ದ ಜಾಗಕ್ಕೆ ಹುಡುಗರು ತೆಗೆದುಕೊಂಡು ಬರುತ್ತಾರೆ. ಆ ದಾರಿಯಲ್ಲಿ ಹೋಗಿ ಬರುವ ಮಂದಿ ಆ ಹುಡುಗರ ಹಾಗೂ ಸಾವಿತ್ರಮ್ಮನ ಆಚರಣೆ ನೋಡಲೆಂದು ಅಲ್ಲಲ್ಲಿ ನಿಂತಿರುತ್ತಾರೆ. ಆ ಹುಡುಗರು ಇನ್ನೇನು ಆಕೆಯ ಮೇಲೆ ಬೂದಿ ಸುರಿಯಬೇಕು . ಆಕೆಯ ಕಣ್ಣು ನಿಂತಿದ್ದ ಗುಂಪಿನ ಕಡೆಗೆ ನೋಡಿ ಏನನ್ನೋ ಗುರುತಿಸುತ್ತದೆ. ಮರುಕ್ಷಣವೇ 'ಶೀನಿ' ಎನ್ನುತ್ತಾ ಕೆಳಗೆ ಬೀಳುತ್ತಾಳೆ. ಹೌದು, ಮಾಯವಾಗಿದ್ದ ಆಕೆಯ ಪತಿ ಆ ಗುಂಪಿನಲ್ಲಿ ಪ್ರತ್ಯಕ್ಷವಾಗಿದ್ದಾನೆ. ತನ್ನ ಹೆಂಡತಿಯನ್ನು ಗುರುತಿಸುತ್ತಾನೆ. ಹುಡುಗರಲ್ಲಿ ಮೂಡಿದ್ದ ಅಪರಾಧಿ ಭಾವ ತೊಲಗಿ ಆನಂದ ಆವರಿಸುತ್ತದೆ. ಈ ಸಲದ ಹಬ್ಬ ಫಲಪ್ರದವಾಯಿತು ಎಂದು ಸಂತಸಪಡುತ್ತಾರೆ. ಸಾವಿತ್ರಮ್ಮ ಆ ಊರಿನಲ್ಲಿ ಮಂಗಳಗೌರಿಯಂತೆ ಗೌರವ, ಮರ್ಯಾದೆ ಪಡೆಯುತ್ತಾಳೆ. ಇದೊಂದು ನಂಬಿಕೆ ಹಾಗೂ ಕಾಯುವಿಕೆಯ ಕ್ರಿಯೆಯಾಗಿದ್ದರೂ ಆಕೆ ಪುಣ್ಯವತಿಯ ಸ್ಥಾನದಲ್ಲಿ ನಿಲ್ಲುತ್ತಾಳೆ.

ಹೋಳಿಹಬ್ಬಕ್ಕೆ ನಿರ್ದಿಷ್ಟ ಕಥೆಯಿಲ್ಲ. ಹಲವು ಕಥೆಗಳು ಈ ಹಬ್ಬದ ಸುತ್ತ ಹರಡಿಕೊಂಡಿವೆ. ವಸಂತ ಋತುವಿನ ಆರಂಭದಲ್ಲಿ ಉತ್ತರ ಪ್ರದೇಶದ ಭಾಗದಲ್ಲಿ ರಾಧಾಕೃಷ್ಣರ ಪ್ರೇಮದಾಟದ ಓಕುಳಿಯಾಟವೆನ್ನುವಂತೆ ನೋಡಲಾಗುತ್ತದೆ. ಸುಗ್ಗಿಯ ಕೊನೆಯ ದಿನಗಳಲ್ಲಿ ಈ ಹಬ್ಬ ಬರುವುದರಿಂದ ರೈತರು ಉತ್ಸಾಹದಿಂದ ಆಚರಿಸುತ್ತಾರೆ. ಹಿರಣ್ಯಕಶಿಪುವಿನ ತಂಗಿ ಹೋಳಿ ಅಗ್ನಿಯ ಭಯವಿಲ್ಲದವಳು ಪ್ರಹ್ಲಾದನೊಂದಿಗೆ ಬೆಂಕಿಗೆ ಹಾರಿದಾಗ ಆಕೆ ದಹಿಸುವುದಲ್ಲದೆ ಪ್ರಹ್ಲಾದ ಪುಟಕ್ಕಿಟ್ಟ ಚಿನ್ನದ ಹಾಗೆ ಹೊರ ಬರುತ್ತಾನೆ. ಬೆಂಕಿಯಿಂದ ಹಾದುಬಂದರೆ ಶುದ್ಧವಾಗುತ್ತೇವೆ ಎಂಬ ನಂಬಿಕೆ ಈ ಆಚರಣೆಯ ಹಿಂದೆ ಇದ್ದ ಹಾಗೆ ತೋರುತ್ತದೆ. ಹೋಳಿ ಅಥವಾ ಹೋಳಿಕೆ ಎಂಬ ರಾಕ್ಷಸಿ ಶಿವನ ವರದಿಂದ ಪ್ರಬಲಳಾಗಿ ಮಕ್ಕಳನ್ನು ಮುಕ್ಕುತ್ತಾ ಹಿಂಸೆ ಕೊಡುತ್ತಿರುತ್ತಾಳೆ. ಆಗ ವಸಿಷ್ಠರು ಆಕೆಯ ಆಕಾರ ಮಾಡಿ, ಅವಾಚ್ಯ ಶಬ್ದಗಳನ್ನೆಲ್ಲಾ ಬಳಸುತ್ತಾ ಆಕೆಯನ್ನು ಉರಿಯುವ ಬೆಂಕಿಯಲ್ಲಿ ಒಗೆಯಿರಿ ಎನ್ನುತ್ತಾರೆ. ಈಗಲೂ ಜನರು ತಮ್ಮ ತೊಂದರೆಗಳನ್ನು ರಾಕ್ಷಸಿಯ ರೂಪದಲ್ಲಿ ಬೆಂಕಿಗೆ ಒಗೆದು ಮುಕ್ತರಾಗುವ ಆಚರಣೆ ನಂಬಿಕೆಯಲ್ಲಿದೆ. ಈ ಎಲ್ಲಾ ಕಥೆಗಳಿಗಿಂತ, ನಂಬಿಕೆಗಳಿಗಿಂತ ಮುಖ್ಯವಾದದ್ದು ತಾರಕಸುರನ ಸಂಹಾರಕ್ಕಾಗಿ ಶಿವ–ಪಾರ್ವತಿಯರ ಸಂಗಮದಿಂದ ಜನಿಸುವ ಕಾರ್ತಿಕೇಯನನ್ನು ಪಡೆಯಬೇಕಾದ ದೇವತೆಗಳ ಪ್ರಯತ್ನ. ಕನಸ್ಸಿನಲ್ಲಿ ಮಗ್ನನಾಗಿದ್ದ ಶಿವನ ಚಿತ್ತವನ್ನು ಕೆಡಿಸಿ ಪಾರ್ವತಿಯತ್ತ ಹರಿಯುವಂತೆ ಮಾಡಲು ಕಾಮನು ಬಿಟ್ಟ ಪುಷ್ಪಶರ ಶಿವನತ್ತ ನುಗ್ಗುತ್ತದೆ. ಶಿವನು ತೆಗೆದ ಹಣೆಗಣ್ಣಿನಿಂದ ಕಾಮ ದಹಿಸಿ ಹೋಗುತ್ತಾನೆ. ಈ ಕಾರಣಕ್ಕಾಗಿಯೇ ಕಾಮನ ಹಬ್ಬ ಅಥವಾ ಹೋಳಿಹಬ್ಬ ನಡೆಯುತ್ತದೆ ಎನ್ನುವುದು ಪ್ರಚಲಿತವಾದ ನಂಬಿಕೆ. ಜನನ ಮತ್ತು ಸಂಹಾರಗಳೆರಡನ್ನೂ ಅವುಗಳದೇ ಕೆಲವು ಐತಿಹ್ಯಗಳಿಂದ ನಾವು ಒಪ್ಪಿಕೊಂಡಿರುವುದರಿಂದ ಕಾಮದಹನವನ್ನೂ ನಮ್ಮ ಪರಂಪರೆ ಆಚರಿಸುತ್ತಾ ಬಂದಿದೆ. ಬಣ್ಣದ ಹಬ್ಬವೆಂದೇ ಅದನ್ನು ಪುರಸ್ಕರಿಸಿದೆ.

■ **ಅಮೃತಮತಿ**

## ಮಾತೇ ಮುತ್ತು

- ಬಿರುದು ಬಾವಲಿಗಳನ್ನು ಕೊಡಬಹುದು. ಆದರೆ ಅದಕ್ಕೆ ಬೆಲೆ ಬರುವುದು ಗುಣದಿಂದ ಮಾತ್ರವೇ.

  —ಬರ್ಟನ್

- ಒಳ್ಳೆಯ ಸುಗಂಧವನ್ನು ಲೇಪಿಸುವುದಕ್ಕಿಂತ ಒಳ್ಳೆಯ ಹೆಸರನ್ನು ಗಳಿಸಿಕೊಳ್ಳುವುದು ಉತ್ತಮ.

  —ಫಡಕೆ

- ಬಲಪ್ರಯೋಗದಿಂದ ಗೆದ್ದರೆ ಶತ್ರುವನ್ನು ಅರ್ಧ ಜಯಿಸಿದಂತೆ.

  —ಜಾನ್ ಮಿಲ್ಟನ್

- ಸಾರ್ವಜನಿಕ ಕೆಲಸ ಮಾಡಲು ಭಾರಿ ಸಂಬಳ ಪಡೆಯುವುದು ಸರಿ ಅಲ್ಲ.

  —ಗಾಂಧೀಜಿ

- ನಾನು ತಪ್ಪು ಮಾಡದಿದ್ದರೆ ನಾನು ಮಾನವನೇ ಅಲ್ಲ, ನೀನು ಕ್ಷಮಿಸದಿದ್ದರೆ ನೀನು ದೇವರೇ ಅಲ್ಲ.

  —ಎಸ್.ವಿ. ಪರಮೇಶ್ವರ ಭಟ್ಟ

- ನಿಮ್ಮ ಸಮಸ್ಯೆಗಳಿಗೆ ನೀವೆ ಉತ್ತರ ಕಂಡುಕೊಳ್ಳಿ. ಅದಕ್ಕಾಗಿ ಬೇರೆಯವರನ್ನು ಅವಲಂಬಿಸಬೇಡಿ.

  —ಬುದ್ಧ